**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ. ನ್ಯಾಯಾಲಯ, ವಿರಾಜಪೇಟೆ.**

**ಕ್ರಿ.ಮೊ ಸಂಖ್ಯೆ : 1239/2020**

ಪಿರ್ಯಾದಿಃ ರಾಜ್ಯ ಸರ್ಕಾರ,
ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆ.

ವಿರುದ್ಧ

ಆರೋಪಿಃ ಶ್ರೀಮತಿ ಮೀನಾ, ಗಂಡಃ ಪೌತಿ ಪೊನ್ನು, ಪ್ರಾಯ 41 ವರ್ಷ, ಗೃಹಿಣಿ ವಾಸಃ ವಾಸುರವರ ಲೈನುಮನೆ, ಅಮ್ಮತ್ತಿ, ಒಂಟಿಯಂಗಡಿ ಗ್ರಾಮ.

**ದಂಡ ಪ್ರಕ್ರಿಯೆ ಸಂಹಿತೆ ಕಲಂ 313ರಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರ.1ಃ ಅಭಿಯೋಜನೆ ಪರ ಇದುವರೆಗೆ ನಡೆದ ಎಲ್ಲಾ ಸಾಕ್ಷ್ಯಗಳನ್ನು ಕೇಳಿರುವಿರಾ?

ಉಃ yes

ಪ್ರ.2ಃ ಪ್ರಾಸಾ-1 ಶಿವಣ್ಣ ಹೆಚ್.ಟಿ ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 15.09.2020ರಂದು ಬೆಳಿಗ್ಗೆ 9.00 ಗಂಟೆಗೆ ಠಾಣಾ ಉಸ್ತುವಾರಿಯಲ್ಲಿರುವಾಗ ಭಾತ್ಮೀದಾರರಿಂದ ಅಮ್ಮತ್ತಿ ಒಂಟಿ ಅಂಗಡಿಯಿಂದ ಆರೋಪಿಯಾದ ನೀವು ನಿಮ್ಮ ವಾಸದ ಮನೆಯ ಹಿಂಭಾಗದ ತೋಟದಲ್ಲಿ ಪುಳಗಂಜಿಯನ್ನು ಸ್ವೀಕರಿಸಿ ಕಳ್ಳಭಟ್ಟಿ ತಯಾರಿಸುತ್ತಿದ್ದ ಬಗ್ಗೆ ಮಾಹಿತಿ ಬಂದ ಮೇರೆಗೆ ದಾಳಿ ಮಾಡಿ ಕ್ರಮ ಕೈಗೊಳ್ಳಲು ಠಾಣಾ ಮೊಕದ್ದಮೆ ಸಂಖ್ಯೆ 64/2020ರಂತೆ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False

ಪ್ರ.3ಃ ಪ್ರಾಸಾ-1 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಈ ವಿಚಾರದ ಬಗ್ಗೆ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿ ಇಲಾಖಾ ಜೀಪು ಸಂಖ್ಯೆ ಕೆಎ-12ಜಿ-650ರಲ್ಲಿ ಸಿಬ್ಬಂದಿಗಳಾದ ಚಾಸಾ-2 ರಿಂದ ಚಾಸಾ-5ರವರನ್ನು ಕರೆದುಕೊಂಡು ಪಂಚರಾದ ಚಾಸಾ-7ರವರನ್ನು ಕರೆದುಕೊಂಡು ಅಮ್ಮತ್ತಿ ಒಂಟಿ ಅಂಗಡಿ ಗ್ರಾಮಕ್ಕೆ ಚೆಂಬೆಬೆಳ್ಳೂರು ಮಾರ್ಗವಾಗಿ ಹೋಗುವಾಗ ಚೆಂಬೆಬೆಳ್ಳೂರಿನ ಬಸ್ ಸೆಲ್ಟರ್ ನಲ್ಲಿ ನಿಂತಿದ್ದ ಚಾಸಾ-8ರವರನ್ನು ಕರೆದುಕೊಂಡು ಒಂಟಿಯಂಗಡಿ ವಾಸುರವರ ಕಾಫಿ ತೋಟಕ್ಕೆ ಬೆಳಿಗ್ಗೆ 10.45ಕ್ಕೆ ದಾಳಿ ಮಾಡಿದಾಗ ಆರೋಪಿಯಾದ ನೀವು ಕಾಫಿ ತೋಟದ ಮಧ್ಯೆ ಬೆಂಕಿ ಹಾಕಿಕೊಂಡು ಅದರ ಮೇಲೆ ಒಂದು ದೊಡ್ಡ ಸಿಲ್ವರ್ ಪಾತ್ರೆಯನ್ನು ಇಟ್ಟು ನೀರನ್ನು ಚೆಲ್ಲುತ್ತಾ ಅವರನ್ನು ಕಂಡು ಓಡಲು ಯತ್ನಿಸಿರುತ್ತೀರಿ. ಆಗ ಅವರು ಸಿಬ್ಬಂದಿಯವರ ಸಹಾಯದಿಂದ

ಸುತ್ತುವರೆದು ಹಿಡಿದುಕೊಂಡು ಮಹಿಳಾ ಸಿಬ್ಬಂದಿ ಸಹಾಯದಿಂದ ವಿಚಾರಿಸಿದಾಗ ಕಳ್ಳಭಟ್ಟಿ ಸಾರಾಯಿ ತಯಾರಿಸುತ್ತಿರುವುದಾಗಿ ತಿಳಿಸಿರುತ್ತೀರಿ. ಇದಕ್ಕೆ ಸರ್ಕಾರದ ಪರವಾನನಿಗೆ ಇದೆಯಾ ಎಂದು ಕೇಳಿದಾಗ ಇಲ್ಲ ಎಂದು ತಿಳಿಸಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False

ಪ್ರ.4ಃ ಪ್ರಾಸಾ-1 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಪಂಚರು ಹಾಗೂ ಸಿಬ್ಬಂದಿಯವರ ಸಹಾಯದಿಂದ ಸುತ್ತಮುತ್ತ ಹುಡುಕಾಡಿದಾಗ ಒಂದು ಕಾಫಿ ಗಿಡದ ಅಡಿಯಲ್ಲಿ ಒಂದು ಬಿಳಿ ಪ್ಲಾಸ್ಟಿಕ್ ಕ್ಯಾನ್ ನಲ್ಲಿ ನೀರಿನಂತಹ ದ್ರವ ಇದ್ದು ಮುಚ್ಚಳ ತೆಗೆದು ಮೂಸಿದಾಗ ಕಳ್ಳಭಟ್ಟಿ ಸಾರಾಯಿ ವಾಸನೆ ಬಂತು. ಹಾಗೆಯೇ ಇನ್ನೊಂದು ಕಾಫಿ ಗಿಡದ ಬುಡದಲ್ಲಿ ಒಂದು ಹಸಿರು ಬಣ್ಣದ ಪ್ಲಾಸ್ಟಿಕ್ ಬಿಂದಿಗೆಯಲ್ಲಿ ಕೊಳೆತ್ತಿರುವಂತಹ ದ್ರವ ಕಂಡು ಬಂದಿದ್ದು, ಇದೇನೆಂದು ಆರೋಪಿಯಾದ ನಿಮ್ಮನ್ನು ಕೇಳಿದಾಗ ಕಳ್ಳಭಟ್ಟಿ ತಯಾರಿಸುವ ಪುಳಗಂಜಿ ಎಂದು ಹೇಳಿರುತ್ತೀರಿ. ನಂತರ ನಿಮ್ಮ ಹೆಸರು, ವಿಳಾಸ ಕೇಳಲಾಗಿ, ನಿಮ್ಮ ಹೆಸರು ಹಾಗೂ ವಿಳಾಸವನ್ನು ತಿಳಿಸಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False

ಪ್ರ.5ಃ ಪ್ರಾಸಾ-1 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಸ್ಥಳದಲ್ಲಿ ದೊರೆತ್ತಿರುವ ವಸ್ತುಗಳನ್ನು ಪಂಚರ ಸಮಕ್ಷಮ ಪರಿಶೀಲಿಸಿ ಪ್ಲಾಸ್ಟಿಕ್ ಕ್ಯಾನ್ ನಲ್ಲಿದ್ದ 2ಲೀಟರ್ ನಷ್ಟು ಕಳ್ಳಭಟ್ಟಿ ಸಾರಾಯಿಯಲ್ಲಿ ಒಂದು ಪ್ಲಾಸ್ಟಿಕ್ ಬಾಟಲಿಗೆ 1 ಲೀಟರ್ ನಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಮಾದರಿಗಾಗಿ ತೆಗೆದು ಹಾಗೆಯೇ ಪ್ಲಾಸ್ಟಿಕ್ ಬಿಂದಿಗೆಯಲ್ಲಿದ್ದ ಪುಳಗಂಜಿಯಲ್ಲಿ 1 ಲೀ. ರಷ್ಟು ಪ್ಲಾಸ್ಟಿಕ್ ಬಾಟಲಿಗೆ ಮಾದರಿಗಾಗಿ ತೆಗೆದು ಮುಚ್ಚಳಕ್ಕೆ ಬಿಳಿ ಬಟ್ಟೆ ಸುತ್ತಿ, ದಾರದಿಂದ ಕಟ್ಟಿ, ಅರಗು ಹಾಕಿ ಎಸ್ ಎಂಬ ಅಕ್ಷರದಿಂದ ಸೀಲು ಮಾಡಲಾಯಿತು ಹಾಗೂ ಸ್ಥಳದಲ್ಲಿ ದೊರೆತ ಒಂದು ದೊಡ್ಡದಾದ ಸಿಲ್ವರ್ ಪಾತ್ರೆ, ಸ್ಟೀಲ್ ಪಾತ್ರೆ, ಒಂದು ಕೆಂಪು ಬಣ್ಣದ ಪ್ಲಾಸ್ಟಿಕ್ ಬೌಲ್ ಅನ್ನು ಬಿಳಿ ಕ್ಯಾನ್ ನಲ್ಲಿ ಉಳಿದ ಕಳ್ಳಭಟ್ಟಿ ಸಾರಾಯಿಯನ್ನು ಹಾಗೂ ಪ್ಲಾಸ್ಟಿಕ್ ಬಿಂದಿಗೆಯಲ್ಲಿ ಉಳಿದ ಪುಳಿಗಂಜಿಯನ್ನು ಸ್ಥಳದಲ್ಲಿ ನಾಶ ಮಾಡಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False

ಪ್ರ.6ಃ ಪ್ರಾಸಾ-1 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಸದರಿ ಎಲ್ಲಾ ವಸ್ತುಗಳನ್ನು ಪಂಚರ ಸಮಕ್ಷಮ ಮಹಜರು ಮೂಲಕ ಅಮಾನತ್ತು ಪಡಿಸಿಕೊಂಡು 10.45 ರಿಂದ 12.15 ಗಂಟೆಯವರೆಗೆ ಪಂಚನಾಮೆ ತಯಾರಿಸಿರುತ್ತಾರೆ. ನಂತರ ಆರೋಪಿಯಾದ ನಿಮ್ಮನ್ನು ಮಹಿಳಾ ಸಿಬ್ಬಂದಿ ಬೆಂಗಾವಲಿನಲ್ಲಿ ಮತ್ತು ಸ್ಥಳದಲ್ಲಿ ದೊರೆತ ವಸ್ತುಗಳನ್ನು ತೆಗೆದುಕೊಂಡು ಠಾಣೆಗೆ ಹಿಂತಿರುಗಿ ಅಮಾನತ್ತು ಪಡಿಸಿಕೊಂಡ ಸ್ವತ್ತುಗಳನ್ನು

ಠಾಣಾ ಸ್ವತ್ತಿನ ಪಟ್ಟಿ ಸಂಖ್ಯೆ 109/2020ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ನಂತರ ಆರೋಪಿಯಾದ ನಿಮ್ಮನ್ನು ಬಂಧನ ಕ್ರಮ ಜರುಗಿಸಿ ವೈದ್ಯಕೀಯ ಪರೀಕ್ಷೆ ಮಾಡಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತಾರೆ. ಅದೇ ದಿನ ಪಂಚರಾದ ಚಾಸಾ-7 ಮತ್ತು 8ರವರ ಹೇಳಿಕೆಯನ್ನು ದಾಖಲು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False

ಪ್ರ.7ಃ ಪ್ರಾಸಾ-1 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 26.09.2020ರಂದು ಅಮಾನತ್ತು ಪಡಿಸಿಕೊಂಡ ಸ್ವತ್ತುಗಳಲ್ಲಿ ಮಾದರಿಗಾಗಿ ತೆಗೆದ ಕಳ್ಳಭಟ್ಟಿ ಮತ್ತು ಪುಳಗಂಜಿಯನ್ನು ರಾಸಾಯನಿಕ ತಜ್ಞರ ಪರೀಕ್ಷೆಗೆ ಆರ್ ಎಫ್ ಎಸ್ ಎಲ್ ಮೈಸೂರಿಗೆ ಕಳುಹಿಸಿರುತ್ತಾರೆ. ಅದೇ ದಿನ ಚಾಸಾ-2 ರಿಂದ ಚಾಸಾ-5ರವರ ಹೇಳಿಕೆಯನ್ನು ಪಡೆದಿರುತ್ತಾರೆ. ದಿನಾಂಕ 16.11.2020ರಂದು ಆರ್ ಎಫ್ ಎಸ್ ಎಲ್ ತಜ್ಞರಿಂದ ವರದಿಯನ್ನು ಪಡೆದುಕೊಂಡಿರುತ್ತಾರೆ. ದಿನಾಂಕ 21.11.2020 ರಂದು ಆರೋಪಿಯಾದ ನಿಮ್ಮ ವಿರುದ್ಧ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False

ಪ್ರ.8ಃ ಪ್ರಾಸಾ-2 ನೆಹರುಕುಮಾರ್ ಕೆ.ಸಿ ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 15.09.2020ರಂದು ಠಾಣಾ ಉಸ್ತುವಾರಿಯಲ್ಲಿದ್ದಾಗ ಚಾಸಾ-1ರವರು ಬೆಳಿಗ್ಗೆ 9.15 ಗಂಟೆಗೆ ಅವರನ್ನು, ಚಾಸಾ-3 ರಿಂದ ಚಾಸಾ-5ರವರನ್ನು ಕರೆದು ಅಮ್ಮತ್ತಿ ಒಂಟಿ ಅಂಗಡಿ ಗ್ರಾಮದ ಒಕ್ಕಲಿಗರ ವಾಸುರವರ ಲೈನ್ ಮನೆಯಲ್ಲಿ ವಾಸವಿರುವ ಆರೋಪಿಯಾದ ನೀವು ನಿಮ್ಮ ಮನೆಯ ಹಿಂಭಾಗದ ಕಾಫಿ ತೋಟದಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರಿಸುತ್ತಿದ್ದ ಬಗ್ಗೆ ಮಾಹಿತಿ ಬಂದಿದ್ದು, ದಾಳಿ ಮಾಡಬೇಕೆಂದು ತಿಳಿಸಿರುತ್ತಾರೆ. ನಂತರ ಠಾಣಾಧಿಕಾರಿಯವರು ವಿರಾಜಪೇಟೆ ನಗರದ ಚಾಸಾ-7ರವರನ್ನು ಪಂಚರಾಗಲು ಠಾಣೆಗೆ ಕರೆಸಿ, ದಾಳಿಯ ವಿಚಾರವನ್ನು ಅವರಿಗೆ ತಿಳಿಸಿ, ಅವರು ಒಪ್ಪಿದ ಮೇರೆಗೆ, ಅವರನ್ನು ಇಲಾಖಾ ವಾಹನದಲ್ಲಿ ಕರೆದುಕೊಂಡು ಅಮ್ಮತ್ತಿ ಒಂಟಿ ಅಂಗಡಿ ಗ್ರಾಮಕ್ಕೆ ಹೋಗುವಾಗ, ಚೆಂಬೆ ಬೆಳ್ಳೂರು ಗ್ರಾಮದ ಬಸ್ ನಿಲ್ದಾಣದಲ್ಲಿದ್ದ ಚಾಸಾ-8 ರವರನ್ನು ಕರೆದು, ನಂತರ ದಾಳಿಯ ವಿಚಾರವನ್ನು ಅವರಿಗೆ ತಿಳಿಸಿ, ಅವರನ್ನು ಪಂಚರಾಗಲು ಕೇಳಿಕೊಂಡಾಗ ಅವರು ಒಪ್ಪಿದ ಮೇರೆಗೆ ಅವರನ್ನು ಇಲಾಖಾ ವಾಹನದಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False

ಪ್ರ.9ಃ ಪ್ರಾಸಾ-2 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಅಲ್ಲಿ ವಾಸುರವರ ಲೈನ್ ಮನೆ ಹಿಂಭಾಗದ ಕಾಫಿ ತೋಟದ ಮಧ್ಯದಲ್ಲಿ ಬೆಂಕಿ ಒಲೆಯನ್ನು ಹಾಕಿ ಅದರ ಮೇಲೆ ಸಿಲ್ವರ್ ಪಾತ್ರೆ ಇಟ್ಟುಕೊಂಡು ಅದರಿಂದ ನೀರನ್ನು ಚೆಲ್ಲುತ್ತಿದ್ದ ಆರೋಪಿಯಾದ ನೀವು ಅವರನ್ನು ಕಂಡು ಓಡಿ ಹೋಗಲು ಪ್ರಯತ್ನಿಸಿದ್ದು, ಅವರುಗಳು ಸುತ್ತುವರೆದು ಚಾಸಾ-5ರವರು ಹಿಡಿದು ನಿಲ್ಲಿಸಿ ಚಾಸಾ-1ರವರು ಆರೋಪಿಯಾದ ನಿಮ್ಮನ್ನು ವಿಚಾರಿಸಿದಾಗ, ಕಳ್ಳಭಟ್ಟಿ ಸಾರಾಯಿ ತಯಾರಿಸುತ್ತಿರುವುದಾಗಿ ತಿಳಿಸಿತ್ತೀರಿ, ನಂತರ ಅದನ್ನು ತಯಾರಿಸಲು ಸರ್ಕಾರದ ಪರವಾನಿಗೆ ಇದೆಯೇ ಎಂದು ಕೇಳಿದಾಗ ಇಲ್ಲ ಎಂಬುದಾಗಿ ತಿಳಿಸಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False

ಪ್ರ.10ಃ ಪ್ರಾಸಾ-2 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಪಂಚರ ಸಮಕ್ಷಮ ಅಕ್ಕಪಕ್ಕದಲ್ಲಿ ನೋಡಲಾಗಿ, ಒಂದು ಕಾಫಿ ಗಿಡದ ಬುಡದಲ್ಲಿ ಒಂದು ಬಿಳಿ ಕ್ಯಾನ್ ನಲ್ಲಿ ನೀರಿನ ದ್ರವರೂಪದ ವಸ್ತು ಇದ್ದು, ಅದರ ಮುಚ್ಚಳ ತೆಗೆದು ಮೂಸಿ ನೋಡಿದಾಗ, ಕಳ್ಳಭಟ್ಟಿ ಸಾರಾಯಿ ವಾಸನೆ ಬರುತ್ತಿದ್ದು, ನಂತರ ನೋಡಲಾಗಿ, ಇನ್ನೊಂದು ಕಾಫಿ ಗಿಡದ ಬುಡದಲ್ಲಿ ಹಸಿರು ಬಣ್ಣದ ಪ್ಲಾಸ್ಟಿಕ್ ಬಿಂದಿಗೆ ಇದ್ದು, ಅದರಲ್ಲಿ ಕಳ್ಳಭಟ್ಟಿ ತಯಾರಿಸುವ ಪುಳಗಂಜಿ ಇರುವುದು ಕಂಡು ಬಂತು. ನಂತರ ಕಳ್ಳಭಟ್ಟಿ ತಯಾರಿಸಲು ಉಪಯೋಗಿಸಿದ ಸಿಲ್ವರ್ ಪಾತ್ರೆ, ಒಂದು ಸ್ಟೀಲ್ ಪಾತ್ರೆ, ಒಂದು ಕೆಂಪು ಬಣ್ಣದ ಪ್ಲಾಸ್ಟಿಕ್ ಬೌಲ್ ಮತ್ತು ಬಿಳಿ ಕ್ಯಾನ್ ನಲ್ಲಿ ಇದ್ದ ಕಳ್ಳಭಟ್ಟಿ ಸಾರಾಯಿಯನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸುವ ಸಲುವಾಗಿ, 2 ಲೀಟರ್ ನಲ್ಲಿ ಒಂದು ಲೀಟರ್ ನಷ್ಟು ಕಳ್ಳಭಟ್ಟಿ ಸಾರಾಯಿಯನ್ನು ತೆಗೆದು 1 ಲೀಟರ್ ಬಾಟಲ್ ಗೆ ಹಾಕಿ ಅದರ ಮುಚ್ಚಳಕ್ಕೆ ಬಿಳಿ ಬಟ್ಟೆಯಿಂದ ಕಟ್ಟಿ, ಅರಗಿನಿಂದ ಎಸ್ ಎಂಬ ಅಕ್ಷರದಿಂದ ಸೀಲ್ ಮಾಡಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False

ಪ್ರ.11ಃ ಪ್ರಾಸಾ-2 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಬಾಕಿ ಉಳಿದ ಬಿಂದಿಗೆಯಲ್ಲಿದ್ದ, ಪುಳಗಂಜಿಯನ್ನು ಪಂಚರ ಸಮಕ್ಷಮ ಅಲ್ಲಿ ನಾಶ ಮಾಡಲಾಯಿತು. ನಂತರ ಆರೋಪಿಯಾದ ನಿಮ್ಮನ್ನು ಹಾಗೂ ಸದರಿ ಎಲ್ಲಾ ವಸ್ತುಗಳನ್ನು ಠಾಣೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಮಹಜರನ್ನು ಬೆಳಿಗ್ಗೆ 10.45 ಗಂಟೆಯಿಂದ 12.15 ಗಂಟೆಯವರೆಗೆ ತಯಾರಿಸಿರುತ್ತಾರೆ. ಸದರಿ ಮಹಜರಿಗೆ ಅವರು ಸಹಿಯನ್ನು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False

ಪ್ರ.12ಃ ಪ್ರಾಸಾ-3ಶಿಲ್ಪಾ ಹೆಚ್.ಎಂ ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 15.09.2020ರಂದು ಸಮಯ ಬೆಳಿಗ್ಗೆ 9.15 ಗಂಟೆಗೆ ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ-

1ರವರು ಅವರನ್ನು, ಚಾಸಾ-2 ರಿಂದ ಚಾಸಾ-4 ಮತ್ತು ಚಾಸಾ-6ರವರನ್ನು ಕರೆದು ಅಮ್ಮತ್ತಿ ಒಂಟಿ ಅಂಗಡಿ ಗ್ರಾಮದ ಒಕ್ಕಲಿಗರ ವಾಸುರವರ ಲೈನ್ ಮನೆಯಲ್ಲಿ ವಾಸವಿರುವ ಆರೋಪಿಯಾದ ನೀವು ನಿಮ್ಮ ಮನೆಯ ಹಿಂಭಾಗದ ಕಾಫಿ ತೋಟದಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರಿಸುತ್ತಿದ್ದ ಬಗ್ಗೆ ಮಾಹಿತಿ ಬಂದಿದ್ದು, ದಾಳಿ ಮಾಡಬೇಕೆಂದು ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False

ಪ್ರ.13ಃ ಪ್ರಾಸಾ-3 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಠಾಣಾಧಿಕಾರಿಯವರು ವಿರಾಜಪೇಟೆ ನಗರದ ಚಾಸಾ-7ರವರನ್ನು ಪಂಚರಾಗಲು ಠಾಣೆಗೆ ಕರೆಸಿ, ದಾಳಿಯ ವಿಚಾರವನ್ನು ಅವರಿಗೆ ತಿಳಿಸಿ, ಅವರು ಒಪ್ಪಿದ ಮೇರೆಗೆ, ಅವರನ್ನು ಇಲಾಖಾ ವಾಹನದ ಸಂಖ್ಯೆ ಕೆಎ-12ಜಿ-650ರಲ್ಲಿ ಕರೆದುಕೊಂಡು ಅಮ್ಮತ್ತಿ ಒಂಟಿ ಅಂಗಡಿ ಗ್ರಾಮಕ್ಕೆ ಹೋಗುವಾಗ, ಚೆಂಬೆ ಬೆಳ್ಳೂರು ಗ್ರಾಮದ ಬಸ್ ನಿಲ್ದಾಣದಲ್ಲಿದ್ದ ಚಾಸಾ-8ರವರನ್ನು ಕರೆದು, ನಂತರ ದಾಳಿಯ ವಿಚಾರವನ್ನು ಅವರಿಗೆ ತಿಳಿಸಿ, ಅವರನ್ನು ಪಂಚರಾಗಲು ಕೇಳಿಕೊಂಡಾಗ ಅವರು ಒಪ್ಪಿದ ಮೇರೆಗೆ ಅವರನ್ನು ಇಲಾಖಾ ವಾಹನದಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಅಲ್ಲಿ ವಾಸುರವರ ಲೈನ್ ಮನೆ ಹಿಂಭಾಗದ ಕಾಫಿ ತೋಟದ ಮಧ್ಯದಲ್ಲಿ ಬೆಂಕಿ ಒಲೆಯನ್ನು ಹಾಕಿ ಅದರ ಮೇಲೆ ಸಿಲ್ವರ್ ಪಾತ್ರೆ ಇಟ್ಟುಕೊಂಡು ಅದರಿಂದ ನೀರನ್ನು ಚೆಲ್ಲುತ್ತಿದ್ದ ಆರೋಪಿಯಾದ ನೀವು ಅವರನ್ನು ಕಂಡು ಓಡಿ ಹೋಗಲು ಪ್ರಯತ್ನಿಸಿದ್ದು, ಅವರುಗಳು ಸುತ್ತುವರೆದು, ನಿಮ್ಮನ್ನು ಹಿಡಿದು ನಿಲ್ಲಿಸಿ ಚಾಸಾ-1ರವರು ನಿಮ್ಮನ್ನು ವಿಚಾರಿಸಿದಾಗ, ಕಳ್ಳಭಟ್ಟಿ ಸಾರಾಯಿ ತಯಾರಿಸುತ್ತಿರುವುದಾಗಿ ತಿಳಿಸಿದ್ದು, ಅದನ್ನು ತಯಾರಿಸಲು ಸರ್ಕಾರದ ಪರವಾನಿಗೆ ಇದೆಯೇ ಎಂದು ಕೇಳಿದಾಗ, ಇಲ್ಲ ಎಂಬುದಾಗಿ ತಿಳಿಸಿರುತ್ತೀರಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False

ಪ್ರ.14ಃ ಪ್ರಾಸಾ-3 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಪಂಚರ ಸಮಕ್ಷಮ ಅಕ್ಕಪಕ್ಕದಲ್ಲಿ ನೋಡಲಾಗಿ ಒಂದು ಕಾಫಿ ಗಿಡದ ಬುಡದಲ್ಲಿ ಒಂದು ಬಿಳಿ ಕ್ಯಾನ್ ನಲ್ಲಿ ನೀರಿನ ದ್ರವರೂಪದ ವಸ್ತು ಇದ್ದು, ಅದರ ಮುಚ್ಚಳ ತೆಗೆದು ಮೂಸಿ ನೋಡಿದಾಗ, ಕಳ್ಳಭಟ್ಟಿ ಸಾರಾಯಿ ವಾಸನೆ ಬರುತ್ತಿದ್ದು, ನಂತರ ನೋಡಲಾಗಿ, ಇನ್ನೊಂದು ಕಾಫಿ ಗಿಡದ ಬುಡದಲ್ಲಿ ಹಸಿರು ಬಣ್ಣದ ಪ್ಲಾಸ್ಟಿಕ್ ಬಿಂದಿಗೆ ಇದ್ದು, ಅದರಲ್ಲಿ ಕಳ್ಳಭಟ್ಟಿ ತಯಾರಿಸುವ ಪುಳಗಂಜಿ ಇರುವುದು ಕಂಡು ಬಂತು. ನಂತರ ಕಳ್ಳಭಟ್ಟಿ ತಯಾರಿಸಲು ಉಪಯೋಗಿಸಿದ ಸಿಲ್ವರ್ ಪಾತ್ರೆ, ಒಂದು ಸ್ಟೀಲ್ ಪಾತ್ರೆ, ಒಂದು ಕೆಂಪು ಬಣ್ಣದ ಪ್ಲಾಸ್ಟಿಕ್ ಬೌಲ್ ಮತ್ತು ಬಿಳಿ ಕ್ಯಾನ್ ನಲ್ಲಿ ಇದ್ದ ಕಳ್ಳಭಟ್ಟಿ ಸಾರಾಯಿಯನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸುವ ಸಲುವಾಗಿ, 2 ಲೀಟರ್ ನಲ್ಲಿ ಒಂದು ಲೀಟರ್ ನಷ್ಟು ಕಳ್ಳಭಟ್ಟಿ ಸಾರಾಯಿಯನ್ನು ತೆಗೆದು 1 ಲೀಟರ್ ಬಾಟಲ್ ಗೆ ಹಾಕಿ ಅದರ ಮುಚ್ಚಳಕ್ಕೆ ಬಿಳಿ

ಬಟ್ಟೆಯಿಂದ ಕಟ್ಟಿ, ಅರಗಿನಿಂದ ಎಸ್ ಎಂಬ ಅಕ್ಷರದಿಂದ ಸೀಲ್ ಮಾಡಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False

ಪ್ರ.15ಃ ಪ್ರಾಸಾ-3 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಹಸಿರು ಬಿಂದಿಗೆಯಲ್ಲಿದ್ದ ಪಳಗಂಜಿಯ ಒಂದು ಲೀಟರ್ ತೆಗೆದು, ಬಾಟಲ್ ಗೆ ಹಾಕಿ, ಬಿಳಿ ಬಟ್ಟೆಯಿಂದ ಕಟ್ಟಿ, ಅರಗಿನಿಂದ ಎಸ್ ಎಂಬ ಅಕ್ಷರದಿಂದ ಸೀಲ್ ಮಾಡಲಾಯಿತು. ಬಾಕಿ ಉಳಿದ ಬಿಂದಿಗೆಯಲ್ಲಿದ್ದ, ಪುಳಗಂಜಿಯನ್ನು ಪಂಚರ ಸಮಕ್ಷಮ ಅಲ್ಲಿ ನಾಶ ಮಾಡಲಾಯಿತು. ನಂತರ ಆರೋಪಿಯಾದ ನಿಮ್ಮನ್ನು ಹಾಗೂ ಸದರಿ ಎಲ್ಲಾ ವಸ್ತುಗಳನ್ನು ಠಾಣೆಗೆ ಕರೆದುಕೊಂಡು ಬಂದಿರುತ್ತಾರೆ. ಈ ಮಹಜರನ್ನು ಬೆಳಿಗ್ಗೆ 10.45 ಗಂಟೆಯಿಂದ 12.15 ಗಂಟೆಯವರೆಗೆ ತಯಾರಿಸಲಾಯಿತು. ಸದರಿ ಮಹಜರಿಗೆ ಅವರು ಸಹಿ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False

ಪ್ರ.16ಃ ಪ್ರಾಸಾ-5 ಐವನ್ ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 15.09.2020ರಂದು ಬಸ್ಸಿಗೆ ಕಾಯುತ್ತಿದ್ದಾಗ, ಅಲ್ಲಿ ಪೋಲೀಸರು ಬಂದು ಆರೋಪಿಯಾದ ನಿಮ್ಮ ಮನೆ ಎಲ್ಲಿ ಎಂದು ಅವರನ್ನು ಕೇಳಿರುತ್ತಾರೆ. ಆಗ ಅವರು ಮನೆ ಗೊತ್ತು ಎಂದು ಆರೋಪಿಯಾದ ನೀವು ವಾಸವಿರುವ ಲೈನ್ ಮನೆಗೆ ಪೋಲೀಸರನ್ನು ಕರೆದುಕೊಂಡು ಹೋಗಿರುತ್ತಾರೆ. ಆರೋಪಿಯಾದ ನೀವು ನಿಮ್ಮ ಮನೆಯ ಹಿಂದೆ ಸಿಲ್ವರ್ ಪಾತ್ರೆಯಲ್ಲಿ ಏನೋ ಬೇಯಿಸುತ್ತಿದ್ದು, ನಂತರ ಅಲ್ಲೇ ಮನೆಯ ಹಿಂದೆ ಒಂದು ಗಿಡದ ಕೆಳಗಡೆ ಪ್ಲಾಸ್ಟಿಕ್ ಬಾಟಲಿನಲ್ಲಿ ನೀರಿನ ತರಹ ಕಾಣುವ ದ್ರವ ಇತ್ತು. ಸದರಿ ಬಾಟಲನ್ನು ತೆಗೆದು ನೋಡಿದಾಗ ಅದರಿಂದ ಭಟ್ಟಿ ಸಾರಾಯಿ ತರಹ ವಾಸನೆ ಬರುತ್ತಿತ್ತು. ಸ್ವಲ್ಪ ದೂರದಲ್ಲಿ ಇರುವ ಗಿಡದ ಕೆಳಗಡೆ ಬಿಂದಿಗೆಯಲ್ಲಿ ಸಾರಾಯಿ ತಯಾರು ಮಾಡಲು ಕಚ್ಚಾ ವಸ್ತು ಇತ್ತು. ಪೋಲೀಸರು ಅವರ ಮುಂದೆ ಮಹಜರು ಕ್ರಮ ಜರುಗಿಸಿ ಅರ್ಧ ಬಾಟಲಿನಷ್ಟು ಪದಾರ್ಥವನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False

ಪ್ರ.17 ಈ ಮೊಕದ್ದಮೆಯ ಬಗ್ಗೆ ನೀವೇನಾದರೂ ಹೇಳುವುದಿದೆಯೇ?

ಉಃ No

ಪ್ರ.18 ನಿಮ್ಮ ಪರ ಸಾಕ್ಷ್ಯ ವಿಚಾರಣೆ ನಡೆಸಲಿಚ್ಛಿಸುವಿರಾ?

ಉಃ No defense evidence.

ಈ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿ ವಿವರಿಸಿ, ಅವರು ಕೊಟ್ಟ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ಸರಿಯಾದ ಮತ್ತು ನಿಜವಾದ ಹೇಳಿಕೆಯೆಂದು ಧೃಢೀಕರಿಸುತ್ತೇನೆ.

sd/-

ಸ್ಥಳಃ ವಿರಾಜಪೇಟೆ ಪ್ರದೀಪ ಪೋತದಾರ

ದಿಃ 09.02.2026 ಪ್ರಭಾರ ಅಪರ ಸಿವಿಲ್ ಜಡ್ಜ್ ಮತ್ತು

ಜೆಎಂಎಫ್‌ಸಿ, ವಿರಾಜಪೇಟೆ.